**ದಿನಾಂಕಃ 10.06.2025 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ.ಎಸ್ ವಕೀಲರಿಂದಃ**

ನಿಪಿ–06 ರ ಕ್ರಯಪತ್ರದಲ್ಲಿ ಕಂಡು ಬರುವ ಆಸ್ತಿಯು ಖುಷ್ಕಿ ಜಮೀನು ಇರುತ್ತದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ನಿಪಿ–06 ರಲ್ಲಿ ಕಂಡು ಬರುವ ಸರ್ವೇ ನಂ.63/1 ಮತ್ತು 63/2 ರ ಆಸ್ತಿಯ ಪಹಣಿ ಪತ್ರಿಕೆ ಮತ್ತು ಋಣಭಾರ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ–07 ರ ಕ್ರಯಪತ್ರದಲ್ಲಿ ಕಂಡು ಬರುವ ಆಸ್ತಿಯು ಕೂಡಾ ಖುಷ್ಕಿ ಜಮೀನು ಇರುತ್ತದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸದರಿ ನಿಪಿ–07 ರಲ್ಲಿ ಕಂಡು ಬರುವ ಆಸ್ತಿಯ ಪ್ರಸ್ತುತ ಪಹಣಿ ಪತ್ರಿಕೆ ಮತ್ತು ಋಣಭಾರ ಪ್ರಮಾಣಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ–08 ಮತ್ತು 9 ರ ಕ್ರಯಪತ್ರಗಳಲ್ಲಿ ಕಂಡು ಬರುವ ಆಸ್ತಿಗಳು ಕೂಡಾ ಖುಷ್ಕಿ ಜಮೀನುಗಳು ಇರುತ್ತವೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸದರಿ ನಿಪಿ–08 ಮತ್ತು 9 ರಲ್ಲಿ ಕಂಡು ಬರುವ ಆಸ್ತಿಗಳ ಪ್ರಸ್ತುತ ಪಹಣಿ ಪತ್ರಿಕೆಗಳು ಮತ್ತು ಋಣಭಾರ ಪ್ರಮಾಣಪತ್ರಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದರೇ ಸದರಿ ಆಸ್ತಿಗಳು ಖುಷ್ಕಿ ಜಮೀನುಗಳು ಇದ್ದು ಮತ್ತು ಸದರಿ ಜಮೀನಿನಲ್ಲಿ ನಾನು ಯಾವುದೇ ಬೆಳೆಯನ್ನು ಬೆಳೆದಿರುವುದಿಲ್ಲ ಎನ್ನುವ ವಿಷಯ ನ್ಯಾಯಾಲಯದ ಗಮನಕ್ಕೆ ಬರುತ್ತದೆ ಎನ್ನುವ ಕಾರಣಕ್ಕೆ ನಾನು ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನಾನು ಬೆಳೆಗಳನ್ನು ಬೆಳೆದಿರುತ್ತೇನೆ ಎಂದು ಸಾಬೀತುಪಡಿಸಲು ಗ್ರಾಮಲೆಕ್ಕಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದು

ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-11 ಮತ್ತು 12 ರಲ್ಲಿ ಕಂಡು ಬರುವಂತೆ ಯಾವುದೇ ಹಸುಗಳನ್ನು ಸಾಕಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಹಾಲಿನ ಡೈರಿ ಇರುತ್ತದೆ. ಸದರಿ ಹಾಲಿನ ಡೈರಿಯ ಸದಸ್ಯತ್ವವನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ಡೈರಿಗೆ ಹಾಲು ಹಾಕುತ್ತೇನೆ. ನಾನು ಹಾಲು ಹಾಕುತ್ತೇನೆ ಎಂದು ತೋರಿಸಲು ನಾನು ಡೈರಿಯಿಂದ ಪಡೆದ ಕಾರ್ಡನ್ನು ಹಾಜರುಪಡಿಸಬಹುದು. ನನ್ನ ಮಗಳು 2017ರ ಪೂರ್ವದಲ್ಲಿಯೇ ಉಪನ್ಯಾಸಕಿ ಆಗಿ ಕೆಲಸಕ್ಕೆ ಸೇರಿರುತ್ತಾಳೆ. ನನ್ನ ಮಗಳನ್ನು 2017ರ ನಂತರದಲ್ಲಿ ಮದುವೆ ಮಾಡಿಕೊಟ್ಟಿದ್ದು, ಆಕೆ ಮದುವೆಯಾಗಿ ಈಗ 9 ವರ್ಷ ಆಗಿರುತ್ತದೆ. ನನ್ನ ಮಗಳು 2017 ರಲ್ಲಿ ತನ್ನಗೆ ಬಂದ ಸಂಬಂಳದ ಹಣವನ್ನು ನನಗೆ ಕೊಡುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು, ಆರೋಪಿ ಮತ್ತು ಆರೋಪಿಯ ಹೆಂಡತಿ ಇಬ್ಬರ ಮೇಲೂ ಸಹ ಒಂದೊಂದು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಎರಡು ಪ್ರಕರಣವನ್ನು ನಾನು ತಲಾ ರೂ.5,00,000/- ಮೊತ್ತಕ್ಕೆ ದಾಖಲಿಸಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಸಂಪಾದಿಸಿದ ಹಣವನ್ನು ನಾನು ಬ್ಯಾಂಕ್ ಖಾತೆಯಲ್ಲಿ ಇಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನನ್ನ ಬಳಿಯೇ ಮನೆಯಲ್ಲಿ ಕೂಡಿ ಇಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ನಾನು ಹೇಳುವ ಮೊತ್ತವನ್ನು ಒಂದು ತಿಂಗಳ ಅಂತರದಲ್ಲಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ತಿ.ನರಸೀಪುರ.

***C.C No.139/2018***

*Case called out. Accused absent. E.P filed. Heard and allowed.*

*P.W.1 present and got partly cross examined by the counsel for the complainant.*

*For further cross examination of P.W.1 by* ***23.06.2025.***

***Civil Judge and JMFC.,***
***T.Narasipura.***

**C.C No.**139/2018 **ಪಿ.ಡಬ್ಲ್ಯೂ** 01

ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**